ವಿಷಯ :- ವಿಜಾಪುರ ಜಿಲ್ಲೆಯ ಇಳಕಲ್‌ನಲ್ಲಿ ಗ್ರಾನೈಟ್ ಸಿಗುವ ಪ್ರದೇಶದ ವಿಸ್ತೀರ್ಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 811 (1551)

ಶ್ರೀ ಬಸನಗೌಡ ರಾ. ಪಾಟೀಲ್ (ವಿಜಾಪುರ) :- ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ಜಿಲ್ಲೆಯ ಇಳಕಲ್ಲಿನಲ್ಲಿರುವ ಗ್ರಾನೈಟ್ ಸಿಗುವ ಒಟ್ಟು ಪ್ರದೇಶ ಎಷ್ಟು; ಈಗಾಗಲೇ ಗಣಿಗಳಿಂದ ತೆಗೆದ ಗ್ರಾನೈಟ್ ಎಷ್ಟು ಎಕರೆ, ಉಳಿದ ಭಾಗ ಎಷ್ಟು;

ಆ) ವರ್ಷಕ್ಕೆ ಈ ಗಣಿಗಳಿಂದ ಬರುವ ರಾಜಧನ ಎಷ್ಟು;

ಇ) ದಿನಾಂಕ 5-8-95 ರಂದು ಜಿಲ್ಲಾಧಿಕಾರಿಗಳು ಮಾಡಿದ ಆದೇಶದಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬ್ಯಾಂಕ್ ಗ್ಯಾರೆಂಟಿ ಮುಖಾಂತರ ಸಂದಾಯವಾದ ಹಣ ಎಷ್ಟು;

ಈ) ದಿನಾಂಕ 27-6-96 ರ ಉಚ್ಚ ನ್ಯಾಯಾಲಯದಲ್ಲಿ ಜಿಲ್ಲಾಧಿಕಾರಿಗಳ ಆದೇಶದ ಮೇಲೆ ರಿಟ್ ಹೋದ ಪರಿಸ್ಥಿತಿಯಲ್ಲಿ ಉಚ್ಚ ನ್ಯಾಯಾಲಯವು ನೀಡಿದ ತೀರ್ಪು ಏನು;

ಉ) ಈ ತೀರ್ಪಿನಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹಣ ರಾಜಧನದ ಮೂಲಕ ಸಂದಾಯವಾಗುತ್ತದೆ (ವಿವರ ನೀಡುವುದು)

ಶ್ರೀ ಎಸ್. ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :-

ಅ) ವಿಜಾಪುರ ಜಿಲ್ಲೆಯ ಇಳಕಲ್‌ನಲ್ಲಿ ಗ್ರಾನೈಟ್ ಶಿಲೆಯು 1490 ಎಕರೆಯಲ್ಲಿ ದೊರಕುತ್ತದೆ. ಇದರಲ್ಲಿ 388 ಎಕರೆಗಳ ಕ್ಷೇತ್ರದಲ್ಲಿ ಗ್ರಾನೈಟ್ ತೆಗೆಯಲಾಗಿದ್ದು, 1102 ಎಕರೆ ಪ್ರದೇಶವು ಉಳಿದಿದೆ.

ಆ) 1995-96 ನೇ ಸಾಲಿಗೆ ಈ ಗಣಿಗಳಿಂದ ರೂ. 871.42 ಲಕ್ಷಗಳ ರಾಜಧನ ಸರ್ಕಾರಕ್ಕೆ ಸಂದಿದೆ.

ಇ) ವಿಜಾಪುರ ಜಿಲ್ಲಾಧಿಕಾರಿಗಳ ಆದೇಶ ದಿನಾಂಕ 5-8-95 ರ ಪ್ರಕಾರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಬ್ಯಾಂಕ್ ಗ್ಯಾರೆಂಟಿ ಮೂಲಕ ರೂ. 23.92 ಕೋಟಿಗಳನ್ನು ಪಡೆದಿದೆ. ಆದರೆ ಈ ಹಣವು ಇನ್ನೂ ರಾಜ್ಯ ಬೊಕ್ಕಸಕ್ಕೆ ಸಂದಾಯ ವಾಗಬೇಕಾಗಿದೆ. ರಾಜ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಈ ಮೊತ್ತವನ್ನು ಸರ್ಕಾರದ ಬೊಕ್ಕಸಕ್ಕೆ ಸಂದಾಯ ಮಾಡಿರುವುದಿಲ್ಲ.

ಈ) ಅನುಸೂಚಿತ ಜಮೀನು ಸರ್ಕಾರಕ್ಕೆ ಸೇರಿರುವುದಾಗಿ ತೀರ್ಪು ನೀಡಿ ಈ ಪ್ರಕರಣವು ಸಿವಿಲ್ ವ್ಯಾಜ್ಯಕ್ಕೆ ಸಂಬಂಧಪಟ್ಟಿರುವುದರಿಂದ ಬಾಧಿತರಾದ ಅರ್ಜಿ ದಾರರು ಸಂಬಂಧಪಟ್ಟ ಸಿವಿಲ್ ನ್ಯಾಯಾಲಯದಲ್ಲಿ ಮೊಕದ್ದಮೆ ಮಾಡಲು ಅವಕಾಶ ಒದಗಿಸಿರುತ್ತದೆ. ಮೇಲ್ಕಂಡ ತೀರ್ಪನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿ. 27-6-96 ರಂದು ಮುಕ್ತ ನ್ಯಾಯಾಲಯದಲ್ಲಿ ನೀಡಿರುತ್ತದೆ. ದೃಢೀಕೃತ ನ್ಯಾಯಾಲಯದ ತೀರ್ಪಿನ ಪ್ರತಿಯನ್ನು ನಿರೀಕ್ಷಿಸಲಾಗಿದೆ.

ಉ) ಹೆಚ್ಚುವರಿ ರಾಜಧನ ಬರುವ ನಿರೀಕ್ಷಣೆ ಇಲ್ಲ.